**<u>ಸಾಕ್ಷಿಯನ್ನು ದಿನಾಂಕಃ 20-02-2026 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.</u>**

**<u>ಪಾಟೀಸವಾಲುಃ ಪ್ರತಿವಾದಿ ಪರ ವಕೀಲರವರಿಂದಃ</u>**

1. ನನಗೆ ಓದಲು ಬರೆಯಲು ಬರುತ್ತದೆ. ನಾನು 8 ನೇ ತರಗತಿಯ ವರೆಗೆ ಓದಿದ್ದೇನೆ. ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ಗೊತ್ತಿವೆ. ಆನಗೂಡು ನಾಗಪ್ಪ ಇವರು ಬಹಳ ವರ್ಷಗಳ ಹಿಂದೆ ತೀರಿಕೊಂಡಿರುವರು ನನಗೆ ಅವರು ಮೃತ ಪಟ್ಟ ದಿನಾಂಕ ಹೇಳಲಾಗುವುದಿಲ್ಲ. ಆನಗೂಡ ನಾಗಪ್ಪನ ಹೆಂಡತಿಯ ಹೆಸರು ನಾರಮ್ಮ ಅಂದರೆ ಸರಿ. ಆನಗೂಡು ನಾಗಪ್ಪ ಮತ್ತು ನಾರಮ್ಮ ಇವರಿಗೆ 4 ಜನ ಮಕ್ಕಳು ಆವರೆಂದರೆ ಕರಿಯಪ್ಪ, ನಿಂಗಮ್ಮ, ನಾಗಮ್ಮ ಮತ್ತು ಸಿದ್ದಮ್ಮ. ಕರಿಯಪ್ಪನಿಗೆ ವಿವಾಹವಾಗಿತ್ತು ಅಂದರೆ ಸರಿ. ಅವರಿಗೆ ಮಕ್ಕಳು ಇರಲಿಲ್ಲ ಅಂದರೆ ಸರಿ.

2. ನಿಂಗಮ್ಮಳಿಗೆ ವಿವಾಹವಾಗಿತ್ತು. ಆಕೆಯ ಗಂಡನ ಹೆಸರು ಕಲ್ಲದ್. ನಿಂಗಮ್ಮಳಿಗೆ 3 ಜನ ಮಕ್ಕಳಿದ್ದು ಅವರೆಂದರೆ ಬಸವರಾಜಪ್ಪ, ನಾಗರಾಜಪ್ಪ ಮತ್ತು ಚೆನ್ನಮ್ಮ. ಅವರೆಲ್ಲರೂ ಈಗ ಮೃತ ಪಟ್ಟಿರುವರು. ಅವರನ್ನು ಈ ಕೇಸಿನಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಸರಿ. ವಾದಿ ಆನಗೂಡು ನಾಮ್ಮಳಿಗೆ ಮಕ್ಕಳು ಇರಲಿಲ್ಲ ಅಂದರೆ ಸರಿ. ಸಿದ್ದಮ್ಮಳಿಗೆ ವಿವಾಹವಾಗಿತ್ತು. ಆಕೆಗೆ ನಂಧ್ಯಮ್ಮ ಅಂದರೆ ನಾನು, ವಿಜಯಮ್ಮ ಮತ್ತು ನಾರಮ್ಮ ಎಂಬ 3 ಜನ ಮಕ್ಕಳು ಇರುವರು.

**ಸಾಕ್ಷಿಯ ಸಹಿ**

3. ಕರಿಯಪ್ಪ ಪ್ರತಿವಾದಿಗೆ ಅಣ್ಣನಾಗಬೇಕು ಅಂದರೆ ಸರಿ. ಕರಿಯಪ್ಪನಿಗೆ ಯಾವುದೇ ರೀತಿಯ ಸಂತಾನ ಇರಲಿಲ್ಲ ಅಂದರೆ ಸರಿ. ಕರಿಯಪ್ಪನು ನನ್ನ ತಾಯಿಯ ಜೊತೆಗೆ ಇದ್ದನು ಅಂದರೆ ಸರಿ. ದಿನಾಂಕ 30.12.1974 ರಂದು ಕರಿಯಪ್ಪರವರು ನನ್ನ ತಾಯಿಗೆ ನೊಂದಾಯಿತ ದಾನ ಪತ್ರವನ್ನು ಬರೆದುಕೊಟ್ಟಿರುವರು ಅಂದರೆ ನನಗೆ ಗೊತ್ತಿಲ್ಲ. ಅಂದಿನಿಂದ ನನ್ನ ತಾಯಿ ಅಂದರೆ ಪ್ರತಿವಾದಿ ದಾವಾ ಅಸ್ತಿಯ ಸ್ವಾಧೀನ ಅನುಭವದಲ್ಲಿ ಇರುವರು ಅಂದರೆ ಸರಿ. ದಾನ ಪತ್ರದ ಅಧಾರದ ಮೇಲೆ ಮುಟೇಶನ್ ಕೂಡ ಆಗಿರುತ್ತದೆ ಅಂದರೆ ನನಗೆ ಗೊತ್ತಿಲ್ಲ ಆ ಮುಟೇಶನ್ ನಂ 14-88-89 ಎಂದು ಇರುವುದು ಅಂದರೆ ನನಗೆ ಗೊತ್ತಿಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು ನೀಡಲಾಯಿತು.

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸರಿಯಿದೆ.**

20-02-2026

**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಹರಪನಹಳ್ಳಿ**

**ಸಾಕ್ಷಿಯ ಸಹಿ**